# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| **ವಿಧಾನ ಪರಿಷತ್ತಿನ ಸದಸ್ಯರ ಹೆಸರು** | : | **ಶ್ರೀ ಸಿ.ಎನ್.ಮಂಜೇಗೌಡ(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)** |
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | **199(224)** |
| **ಉತ್ತರಿಸಬೇಕಾದ ಸಚಿವರು** | : | **ಕೃಷಿ ಸಚಿವರು** |
| **ಉತ್ತರಿಸಬೇಕಾದ ದಿನಾಂಕ** | : | **18/08/2026** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| **ಅ)** | ಭಾರತೀಯ ಕೃಷಿ ಸಂಶೋಧನಾ ಮಂಡಳಿ(ICAR) ಹಾಗೂ ಕೃಷಿ ವಿಜ್ಞಾನ ಕೇಂದ್ರಗಳ (KVK) ಮೂಲಕ ಜಾರಿಗೆ ತರಲಾಗುತ್ತಿರುವ 'ಪೌಷ್ಟಿಕ-ಸೂಕ್ಷ್ಮ ಕೃಷಿ-ಸಂಪನ್ಮೂಲಗಳು ಮತ್ತು ನಾವೀನ್ಯತೆಗಳು (Nutri-Sensitive Agricultural Resources and Innvoations-NARI) ಯೋಜನೆಯನ್ನು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ಕೈಗೊಂಡಿರುವ ಕ್ರಮಗಳೇನು; | <u>ಚಾಮರಾಜನಗರ ಜಿಲ್ಲೆ:-</u> ಐ.ಸಿ.ಎ.ಆರ್ – ಕೃಷಿ ವಿಜ್ಞಾನಕೇಂದ್ರ, ಚಾಮರಾಜನಗರಜಿಲ್ಲೆಗೆ ಭಾರತೀಯ ಕೃಷಿ ಸಂಶೋಧನಾ ಮಂಡಳಿಯಿಂದ ನಾರಿ(NARI)ಯೋಜನೆಯು ಮಂಜೂರಾಗಿರುವುದಿಲ್ಲ.<br>ಕೃಷಿ ವಿಜ್ಞಾನ ಕೇಂದ್ರ, ಚಾಮರಾಜನಗರದಿಂದ ಇತರೆ ಯೋಜನೆಗಳಲ್ಲಿ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ:<br><br>ಅಮಚವಾಡಿ, ಕೋಡಿ ಉಗಣೆ, ಹರದನಹಳ್ಳಿ, ಕಮರವಾಡಿ, ಬಂಡಿಗೆರೆ, ಇರಸವಾಡಿ, ಉತ್ತವಹಳ್ಳಿ, ಸಿದ್ದಯ್ಯನಪುರ, ಹೊಂಗಲವಾಡಿ, ರಾಮಸಮುದ್ರ, ಹೆಗ್ಗವಾಡಿ, ಮುಕ್ಕಡಹಳ್ಳಿ, ಅಮಚವಾಡಿ, ಹೊರೆಯಾಳ ಗ್ರಾಮಗಳ ಅಂಗನವಾಡಿ ಕೇಂದ್ರಗಳಲ್ಲಿ ಮತ್ತು ಶಾಲೆಗಳಲ್ಲಿ ವರ್ಷಪೂರ್ತಿ ಪೌಷ್ಟಿಕಾಂಶ ಭದ್ರತೆಒದಗಿಸುವ 'ನ್ಯೂಟ್ರಿಗಾರ್ಡನ್' (ಪೌಷ್ಟಿಕ ತೋಟ) ಕುರಿತ ಪ್ರಾತ್ಯಕ್ಷಿಕೆ ಮತ್ತುತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.<br><br><u>**ಮೈಸೂರು ಜಿಲ್ಲೆ:**</u> ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನಕೇಂದ್ರದ ವತಿಯಿಂದNutri-Sensitive Agricultural Resources and Innovations (NARI)ಕಾರ್ಯಕ್ರಮವನ್ನು 2020–21ನೆಯ ಸಾಲಿನಲ್ಲಿಅರಕರೆ ಗ್ರಾಮ, ಕೆ.ಆರ್. ನಗರತಾಲ್ಲೂಕಿನಲ್ಲಿ ಹಮ್ಮಿಕೊಳ್ಳಲಾಗಿದೆ. ಮೈಸೂರುಜಿಲ್ಲೆಯಲ್ಲಿ ಪೌಷ್ಟಿಕಾಂಶ ಸುರಕ್ಷತೆ ಮತ್ತುಆಹಾರ ವೈವಿಧ್ಯತೆಯನ್ನು ಸುಧಾರಿಸಲು ಸುಸ್ಥಿರ ಪದ್ಧತಿಗಳನ್ನು ಬಳಸಿಕೊಂಡು ವೈವಿಧ್ಯಮಯ ತರಕಾರಿಗಳು, ಹಣ್ಣುಗಳು ಮತ್ತು ಗಿಡಮೂಲಿಕೆಗಳ ಕೃಷಿಯನ್ನು ಉತ್ತೇಜಿಸಲು ನ್ಯೂಟ್ರಿಗಾರ್ಡನ್ (ಪೌಷ್ಟಿಕ ಕೈತೋಟ) ಕಾರ್ಯಕ್ರಮವನ್ನು ಜಾರಿಗೆ ತರಲಾಗಿದೆ. ಇದು ಗ್ರಾಮಿಣ ಪ್ರದೇಶಗಳಲ್ಲಿ ರೈತರು, ರೈತ ಮಹಿಳೆಯರು, ಮತ್ತು ಗ್ರಾಮೀಣ ಸಮುದಾಯಗಳನ್ನು ವರ್ಷಪೂರ್ತಿ ತಾಜಾ, ಸುರಕ್ಷಿತ ಮತ್ತು ಪೌಷ್ಟಿಕ ಉತ್ಪನ್ನಗಳನ್ನು ಪಡೆಯಲು ಮತ್ತು ಹೆಚ್ಚುವರಿ ಆದಾಯವನ್ನು ಗಳಿಸಲು ಪೌಷ್ಟಿಕಾಂಶ–ಸೂಕ್ಷ್ಮ ತೋಟಗಾರಿಕೆಯನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹಿಸಲಾಗಿದೆ. |
| **ಆ)** | ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಗ್ರಾಮೀಣ ಮತ್ತು ಗಿರಿಜನ (ಬುಡಕಟ್ಟು) (Tribal) ಪ್ರದೇಶಗಳಲ್ಲಿ, ವಿಶೇಷವಾಗಿ ಮಹಿಳೆಯರು ಮತ್ತು ಮಕ್ಕಳಲ್ಲಿ ಕಂಡುಬರುವ ಅಪೌಷ್ಟಿಕತೆ ಹಾಗೂ ರಕ್ತ ಹೀನತೆಯನ್ನು (Anemia) ನೀಗಿಸಲು NARI ಯೋಜನೆಯಡಿ ಹಮ್ಮಿಕೊಳ್ಳಲಾಗಿರುವ ಪ್ರಮುಖ | ಚಾಮರಾಜನಗರ ಜಿಲ್ಲೆಯ ರೈತ ಮಹಿಳೆಯರಿಗೆ (ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಜನಾಂಗದವರಿಗೆ) ಪೌಷ್ಟಿಕ ತೋಟಗಳ ಸ್ಥಾಪನೆ, ಅಪೌಷ್ಟಿಕತೆ ಮತ್ತು ರಕ್ತಹೀನತೆಯನ್ನು ನೀಗಿಸುವ ಸಲುವಾಗಿ ಈ ಕೆಳಕಂಡಂತೆ ತರಬೇತಿ ಕಾರ್ಯಕ್ರಮಗಳನ್ನು ಜರುಗಿಸಲಾಗಿದೆ. |

ಉದ್ದೇಶಗಳು ಹಾಗೂ ಕಾರ್ಯವಿಧಾನಗಳೇನು;

| ಕ್ರ. ಸಂ. | ಸ್ಥಳ | ಕಾರ್ಯಕ್ರಮ | ದಿನಾಂಕ | ಭಾಗವಹಿಸಿದ ರೈತ ಮಹಿಳೆಯರ ಸಂಖ್ಯೆ |
|---|---|---|---|---|
| 1 | ಬಿಳಿಗಿರಿ ರಂಗನಾಥ | ಪೌಷ್ಟಿಕ ಕೈತೋಟದ ಮಹತ್ವ | 27.12.2022 | 93 |
| 2 | ರಂಗಸಂದ್ರ | ಬಾಳೆದಿಂಡಿನ ಮಹತ್ವ ಮತ್ತು ಮೌಲ್ಯವರ್ಧನೆ | 27.1.2023 | 18 |
| 3 | ವೀರಯ್ಯನಪುರ | ಸಮತೋಲನ ಆಹಾರದ ಮಹತ್ವ | 04.11.2023 | 16 |
| 4 | ರಂಗಸಂದ್ರ | ಅಣಬೆಬೇಸಾಯದ ಮಹತ್ವ ಮತ್ತು ಮೌಲ್ಯವರ್ಧನೆ | 05.01.2024 | 35 |
| 5 | ಬಾಣವಾಡಿ | ಸಿರಿಧಾನ್ಯಗಳ ಮಹತ್ವ ಮತ್ತು ಮೌಲ್ಯವರ್ಧನೆ | 14.06.2024 | 37 |
| 6 | ಮುನೇಶ್ವರ ಕಾಲೋನಿ | ಪೌಷ್ಟಿಕ ಕೈತೋಟದ ಮಹತ್ವ | 14.06.2024 | 53 |
| 7 | ಬೂದಿಪಡಗ | ಪೌಷ್ಟಿಕ ಕೈತೋಟದ ಮಹತ್ವ | 14.06.2024 | 53 |
| 8 | ಯರಕನಗದ್ದೆ ಕಾಲೋನಿ | ಪೌಷ್ಟಿಕ ಕೈತೋಟದ ಮಹತ್ವ | 08.07.2024 | 24 |
| 9 | ಸಿಗೇಬೆಟ್ಟ | ಸಿರಿಧಾನ್ಯಗಳ ಮಹತ್ವ ಮತ್ತು ಮೌಲ್ಯವರ್ಧನೆ | 08.07.2024 | 24 |
| 10 | ತೋಮಿಯರ್ ಪಾಳ್ಯ | ಸಿರಿಧಾನ್ಯಗಳ ಮಹತ್ವ ಮತ್ತು ಮೌಲ್ಯವರ್ಧನೆ | 16.07.2024 | 19 |
| 11 | ನಾಗವಳ್ಳಿ | ಸಮತೋಲನ ಆಹಾರದ ಮಹತ್ವ | 06.12.2024 | 31 |
| 12 | ಶ್ರೀನಿವಾಸಪುರ ಕಾಲೋನಿ | ಅಣಬೆ ಬೇಸಾಯದ ಮಹತ್ವ ಮತ್ತು ಮೌಲ್ಯವರ್ಧನೆ | 12.11.2025 | 20 |
| 13 | ಮಣಜನೂರು | ಸಮತೋಲನ ಆಹಾರದ ಮಹತ್ವ | 12.11.2025 | 25 |
| 14 | ತುಳಸೀಕೆರೆ | ಅಣಬೆ ಬೇಸಾಯದ ಮಹತ್ವ ಮತ್ತು ಮೌಲ್ಯವರ್ಧನೆ | 21.12.2025 | 12 |
| ಒಟ್ಟು | | | | 460 |

<table>
<tr>
<td>ಇ)</td>
<td>ದೇಶಾದ್ಯಂತ ಮಾದರಿಯಾಗಿ ಆಯ್ಕೆ ಮಾಡಲಾದ "ಪೌಷ್ಟಿಕ-ಸ್ಮಾರ್ಟ್ ಗ್ರಾಮಗಳಲ್ಲಿ (Nutri-Smart Villages) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಿಂದ ಆಯ್ಕೆಯಾಗಿರುವ ಗ್ರಾಮಗಳ ಸಂಖ್ಯೆ ಮತ್ತು ಅವುಗಳ ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು;</td>
<td>ಚಾಮರಾಜನಗರಜಿಲ್ಲೆ: ಐ.ಸಿ.ಎ.ಆರ್ ಕೃಷಿ ವಿಜ್ಞಾನಕೇಂದ್ರ, ಚಾಮರಾಜನಗರಕ್ಕೆ ಭಾರತೀಯ ಸಂಶೋಧನಾ ಮಂಡಳಿಯಿಂದ ಪೌಷ್ಟಿಕ ಸ್ಮಾರ್ಟ್‌ಗ್ರಾಮ(Nutri Smart Village)ಯೋಜನೆಯು ಮಂಜೂರಾಗಿರುವುದಿಲ್ಲ.<br>ಕೇಂದ್ರದ ಇತರೆ ಕಾರ್ಯಕ್ರಮಗಳ ಮುಖಾಂತರ, ದೊಡ್ಡರಾಯಪೇಟೆ, ಅರಳೀಪುರ, ದಾಸನಹುಂಡಿ, ಯರಗಂಬಳ್ಳಿ, ಕುಂಬೇಶ್ವರ ಕಾಲೋನಿ, ಜ್ಯೋತಿಗೌಡನಪುರ, ಅಟ್ಟಗುಳಿಪುರ, ದೊಡ್ಡಮೋಳೆ, ಹುಣಸೇಪಾಳ್ಯ, ಬಾಳೆಗುಣಸೆ, ಮುಡ್ನಾಕೂಡು, ಕಲ್ಪುರ, ಮಧುವನಹಳ್ಳಿ, ಪಿ.ಜಿ. ಪಾಳ್ಯ, ಮಂಗಲ, ಯಳಂದೂರು, ಟಗರುಪುರ, ಕೆಸ್ತೂರು, ಸೋಮವಾರಪೇಟೆ, ಹೆಚ್. ಮೂಕಹಳ್ಳಿ ಗ್ರಾಮಗಳಲ್ಲಿ 60 ರೈತ ಕುಟುಂಬಗಳಿಗೆ ವರ್ಷ ಪೂರ್ತಿ ಪೌಷ್ಟಿಕಾಂಶ ಭದ್ರತೆ ಒದಗಿಸುವ 'ನ್ಯೂಟ್ರಿಗಾರ್ಡನ್' (ಪೌಷ್ಟಿಕ ತೋಟ) ಕುರಿತ ಮುಂಚೂಣಿ ಪ್ರಾತ್ಯಕ್ಷಿಕೆ ಕೈಗೊಳ್ಳಲಾಗಿದೆ.<br><br>ಮೈಸೂರುಜಿಲ್ಲೆ:2020–21ನೇ ಸಾಲಿನಲ್ಲಿ ನ್ಯೂಟ್ರಿಷನ್ ಸ್ಮಾರ್ಟ್‌ಗ್ರಾಮ ಯೋಜನೆಯಡಿ ಮಹಿಳೆಯರಿಗಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಅರಕೆರೆಗ್ರಾಮ, ಕೆ.ಆರ್. ನಗರ ತಾಲೂಕಿನಲ್ಲಿ ಹಮ್ಮಿಕೊಳ್ಳಲಾಗಿತ್ತು.
<table>
<tr><th>ಚಟುವಟಿಕೆಗಳು</th><th>ರೈತ ಮಹಿಳೆಯರ ಸಂಖ್ಯೆ</th></tr>
<tr><td>ನ್ಯೂಟ್ರಿಗಾರ್ಡನ್ ಬೀಜ ಹಾಗೂ ಸಸಿಗಳ ವಿತರಣೆ</td><td>30</td></tr>
<tr><td>ಬಿಳಿ ರಾಗಿಧಾನ್ಯ ವಿತರಣೆ ಮೌಲ್ಯವರ್ಧನೆ ಮಾಡುವುದಕ್ಕೆ</td><td>12</td></tr>
<tr><td>ನವಣೆಧಾನ್ಯ ವಿತರಣೆ ಮೌಲ್ಯವರ್ಧನೆ ಮಾಡುವುದಕ್ಕೆ</td><td>12</td></tr>
<tr><td>ತರಬೇತಿ</td><td>146</td></tr>
<tr><td>ಪ್ರಾತ್ಯಕ್ಷಿಕೆಗಳು</td><td>54</td></tr>
<tr><td>ಕೃಷಿ ವಿಸ್ತರಣಾ ಚಟುವಟಿಕೆಗಳು</td><td>184</td></tr>
</table>
</td>
</tr>
<tr>
<td>ಈ)</td>
<td>ಈ ಗ್ರಾಮಗಳಲ್ಲಿ ಯೋಜನೆ ಅನುಷ್ಠಾನಕ್ಕಾಗಿ ಮಹಿಳಾ ರೈತರಿಗೆ ನೀಡಲಾಗಿರುವ ತರಬೇತಿ ಪೌಷ್ಟಿಕ ತೋಟಗಳ ಸ್ಥಾಪನೆ ಮತ್ತು ಪ್ರಾತ್ಯಕ್ಷಿಕೆಗಳ (Demos) ಪ್ರಸ್ತುತ ಸ್ಥಿತಿಗತಿ ಯಾವ ಹಂತದಲ್ಲಿದೆ.</td>
<td><u>ಚಾಮರಾಜನಗರ ಜಿಲ್ಲೆ:</u> ಈ ಗ್ರಾಮಗಳಲ್ಲಿ ಅನುಷ್ಠಾನಗೊಳಿಸಲಾದ ಪೌಷ್ಟಿಕ ಕೈತೋಟಗಳನ್ನು ವ್ಯವಸ್ಥಿತವಾಗಿ ನಿರ್ವಹಣೆ ಮಾಡಲಾಗುತ್ತಿದ್ದುರೈತ ಕುಟುಂಬಗಳ ದಿನನಿತ್ಯದ ಬಳಕೆಗೆ ಉಪಯೋಗಿಸಲಾಗುತ್ತಿದೆ.<br><br><u>ಮೈಸೂರು ಜಿಲ್ಲೆ:</u><br>2024–25 ಸಾಲಿನಲ್ಲಿ ಪೌಷ್ಟಿಕ ಕೈತೋಟ ಹಮ್ಮಿಕೊಂಡಿರುವುದು.
<table>
<tr><th>ಕ್ರಸಂ</th><th>ವಿವರ</th><th>ತಾಲ್ಲೂಕು</th><th>ರೈತರ ಮಹಿಳೆಯರ ಸಂಖ್ಯೆ</th></tr>
<tr><td>1</td><td>ರೈತ ಕುಟುಂಬಗಳ ಪೌಷ್ಟಿಕಾ ಭದ್ರತೆಗಾಗಿ ಪೌಷ್ಟಿಕ ಕೈ ತೋ ನಿರ್ಮಾಣ</td><td rowspan="2">ನಂಜನಗೂಡು</td><td>32</td></tr>
<tr><td>2</td><td>ತರಬೇತಿ (2)</td><td>68</td></tr>
</table>
<br>ಪರಿಣಾಮ
<ul><li>ಪೌಷ್ಟಿಕ ತೋಟವುರೈತ ಕುಟುಂಬಗಳ ಪೌಷ್ಟಿಕ ಭದ್ರತೆ ಮತ್ತುಆಹಾರ ವೈವಿಧ್ಯತೆಯನ್ನು ಸುಧಾರಿಸಿದೆ.</li></ul>
</td>
</tr>
</table>

| | | |
|---|---|---|
| | | • ತಾಜಾ ತರಕಾರಿಗಳು ಮತ್ತು ಹಣ್ಣುಗಳನ್ನು ನಿಯಮಿತವಾಗಿ ಸೇವಿಸುವ ಮೂಲಕ ಮಹಿಳೆಯರು ಮತ್ತು ಮಕ್ಕಳ ಪೌಷ್ಠಿಕ ಸ್ಥಿತಿಯನ್ನು ಹೆಚ್ಚಿಸಿದೆ.<br>• ಆಹಾರಉತ್ಪಾದನೆ ಮತ್ತು ನಿರ್ಧಾರ ತೆಗೆದುಕೊಳ್ಳುವಲ್ಲಿ ತೊಡಗಿಸಿಕೊಳ್ಳುವ ಮೂಲಕ ಮಹಿಳಾ ಸಬಲೀಕರಣವನ್ನು ಬಲಪಡಿಸಿದೆ.<br>ತರಕಾರಿಗಳ ಮಾರಾಟದ ಮೂಲಕ ಹೆಚ್ಚುವರಿ ಆದಾಯವನ್ನು ಗಳಿಸಲಾಗಿದೆ. |

**ಇ-ಸಂಖ್ಯೆ: AGRI/88/AUM/2026**

P. M. Narendra Swamy

(ಪಿ.ಎಂ. ನರೇಂದ್ರ ಸ್ವಾಮಿ)

ಕೃಷಿ ಸಚಿವರು